ನಾಗರಹಾವಿನ ಕಡಿತದಿಂದ ಉಂಟಾಗಿರ ವ ಸಾವಿಗೋಸ್ಕರ ನಿಜವಾಗಿ ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಅಲ್ಲಿ ಬೀದಿ ದೀಪ ಹಾಕುವುದಕ್ಕೆ ಒಂದು ಅಂದಾಜು ತಯಾರು ಮಾಡಿದ್ದಾರೆ. ಪ ಂಡಲ ಪಂಚಾಯಿತಿಯ ಪ್ರಧಾನರು ಅದಕ್ಕೆ ಒಂದು ಕರಾರು ಅಗ್ರಿಮೆಂಟ್ ಮಾಡಿಕೊಡಬೇಕು, ಆ ಅಗ್ರಿಮೆಂಟನ್ನು ಕೊಟ್ಟರೆ ತಕ್ಷಣ ಬೀದಿ ದೀಪ ಹಾಕಿಸುವುದಕ್ಕೆ ಏರ್ಪಾಡು ಮಾಡಬಹುದು. ನನಗೆ ಬಂದಿರತಕ್ಕ ವರದಿ ಪ್ರಕಾರ ಅಗ್ರಿಮೆಂಟ್ ಕೊಡುವ ಬಗ್ಗೆ ಒತ್ತಾಯ ಪಡಿಸಿದಾಗ ಮಂಡಲ ಪಂಚಾಯಿತಿಯ ಪ್ರಧಾನರು ಕ್ರಮ ತೆಗೆದುಕೊಂಡಿಲ್ಲ. ಅವರು ಸೂಕ್ತ ಕ್ರಮ ತೆಗೆದುಕೊಂಡು ಅಗ್ರಿಮೆಂಟ್ ಕೊಟ್ಟ ಕೂಡಲೇ ಬೀದಿ ದೀಪಗಳನ್ನು ಹಾಕಿಸುವುದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

(ಮಾನ್ಯ ಸದಸ್ಯರಾದ ಬಸವರಾಜ್, ಕೆ. ಎಚ್. ಪಾಟೀಲ್, ವಸಂತ ಬಂಗೇರ ಹೆಚ್. ಜಿ. ಗೋವಿಂದೇಗೌಡ—ಅವರುಗಳು ಗೈರುಹಾಜರಾಗಿದ್ದಾರೆ.)

5) ಕುಂದಾಪುರಕ್ಕೆ ಅಗ್ನಿಶಾಮಕ ದಳವನ್ನು ಒದಗಿಸುವುದು.

ಶ್ರೀ ಪ್ರತಾಪಚಂದ್ರ ಶೆಟ್ಟಿ —ಮಾನ್ಯ ಅಧ್ಯಕ್ಷರೆ, ಅಗ್ನಿಶಾಮಕದಳವನ್ನು ಕುಂದಾಪುರಕ್ಕೆ ಒದಗಿಸುವ ಕುರಿತು—ಕಡಲ ತೀರದ ಕುಂದಾಪುರ ತಾಲ್ಲೂಕಿನಲ್ಲಿ ಬೆಂಕಿ ಅನಾಹುತ ಬಹಳ ಬೇಸಿಗೆಯ ಉರಿಬಿಸಿಲು, ಸಮುದ್ರದ ಬಿರುಸಿನ ಗಾಳಿಯ ಹೊಡೆತ, ಅತ್ಯಂತ ಬಡ ಹಾಗೂ ದುರ್ಬಲವರ್ಗದ ಬಡಪರ ಹುಲ್ಲಿನ ಹಾಗೂ ಸೋಗೆಯ ಮನೆಗಳು ಇವೆಲ್ಲ ಉರಿ ಉಲ್ಬಣಿಸಲು ಪೂರಕವಾಗಿವೆ. ಬೆಂಕಿ ಬಿದ್ದಾಗ ದೂರದ ಉಡುಪಿಯಲ್ಲಿರುವ ಅಗ್ನಿಶಾಮಕ ದಳಕ್ಕೆ ಕರೆ ಕಳುಹಿಸಬೇಕಾಗುತ್ತದೆ. ಅಲ್ಲಿಂದ ಬರುವುದರೊಳಗೆ ಇಲ್ಲಿ ಎಲ್ಲವೂ ಭಸ್ಮ. ಕೆಲವೊಮ್ಮೆ ಬೇರೆ ಕಡೆ ಹೋಗಬೇಕಾದ ಪ್ರಸಂಗವೂ ಇರುತ್ತದೆ ಹಾಗಾಗಿ ಅನೇಕ ಕಾರ್ಖಾನೆಗಳು, ಕಟ್ಟಿಗೆ ಡಿಪೋಗಳು. ಬೆಲೆ ಬಾಳುವ ಉದ್ದಿಮೆಗಳು. ಮಿನು ಮಾರಾಟ ಕೇಂದ್ರ, ರೈತರ ಮನೆಗಳು. ವ್ಯವಸಾಯೋತ್ಪನ್ನ ಸಂಗ್ರಹ, ಹೈನುಗಾರಿಕೆ ಕೇಂದ್ರಗಳು ಇತ್ಯಾದಿಗಳ ಹಾಗೂ ಜನ ಜಾನುವಾರುಗಳ ರಕ್ಷಣೆಗೆ ಕುಂದಾಪುರದಲ್ಲಿಯೇ ಒಂದು ಅಗ್ನಿಶಾಮಕದಳ ಇರುವಂತೆ ಶೀಘ್ರ ಮಂಜೂರಾತಿ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ

ಶ್ರೀ ಆರ್ ಎಲ್. ಜಾಲಪ್ಪ, (ಗೃಹ ಸಚಿವರು) —ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಹಾಲಿ ೩೨ ಅಗ್ನಿಶಾಮಕ ಠಾಣೆಗಳನ್ನು ಈಗಾಗಲೇ ತೆರೆದಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು ಮತ್ತು ಉಡುಪಿಯಲ್ಲಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲಾಗಿದೆ

ರಾಜ್ಯದಲ್ಲಿ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಪರಿಪೂರ್ಣವಾಗಿ ಬೇಕಾಗಿರುವ ಉಪಕರಣಗಳನ್ನು ಕೊಳ್ಳಲು ಭಾರತ ಸಾರ್ವಾನ್ಯ ವಿಮಾ ನಿಗಮದಿಂದ ಸಾಲ ತೆಗೆದುಕೊಳ್ಳಲಾಗುತ್ತಿದೆ.

ಕುಂದಾಪುರಕ್ಕೆ, ಉಡುಪಿ ಅಗ್ನಿಶಾಮಕ ಠಾಣೆಯು ೩೮ ಕಿ. ಮಿ. ದೂರದಲ್ಲಿದ್ದು, ಉಡುಪಿ ಅಗ್ನಿಶಾಮಕ ಠಾಣೆಯು ಕುಂದಾಪುರ ಪಂಚಾಯ್ತಿ ಸುತ್ತಮುತ್ತಲಿನ ಪ್ರದೇಶದಲ್ಲಿ ಸಂಭವಿಸಬಹುದಾದ ಅಗ್ನಿ ದುರಂತಗಳನ್ನು ನಂದಿಸುವ ಕಾರ್ಯವೈಖರಿಯನ್ನು ನೋಡಿಕೊಳ್ಳುತ್ತಿದೆ. ಉಡುಪಿ ಕೇಂದ್ರಕ್ಕೆ ಕುಂದಾಪುರದಿಂದ ೧೯೮೫, ೧೯೮೬ ಮತ್ತು ೧೯೮೭ ವರ್ಷಗಳಲ್ಲಿ ಕೇವಲ ೧೩ ಕರೆಗಳು ಮಾತ್ರ ಬಂದಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಮಳೆ ಬೀಳುವ ಪ್ರದೇಶವಾಗಿದ್ದು, ಹತ್ತಿ ಬೆಳೆಯುವ ಉತ್ತರ ಕನ್ನಡ ಜಿಲ್ಲೆಗೆ ಹೋಲಿಸಿದರೆ, ಕುಂದಾಪುರದಲ್ಲಿ ಅಗ್ನಿ ದುರಂತಗಳ ಸಂಖ್ಯೆ ಕಡಿಮೆ. ಆದುದರಿಂದ, ಕುಂದಾಪುರದಲ್ಲಿ ಅಗ್ನಿಶಾಮಕ ಠಾಣೆ ತೆರೆಯುವ ಪ್ರಸ್ತಾವನೆ ಸದ್ಯಕ್ಕೆ ಇಲ್ಲ.

6) ರೇವಜಿತ್ ಬಿಲ್ಡರ್ಸ್‌ರವರಿಂದ ಸೌತ್ ಎಂಡ್ ಬಳಿ 5 ಎಕ್ರೆ, 24 ಗುಂಟೆ ಜಮೀನಿನ ವರ್ಗಾವಣೆ ವ್ಯವಹಾರ

ಶ್ರೀ ಬಿ. ಲಕ್ಷ್ಮಪ್ಪ.—"ಹೆಗಡೆ ಬಂದು ಆಸ್ತಿ ತನಿಖೆ" ಈ ಶಿರೋನಾಮೆಯಲ್ಲಿ ಲಂಕೇಶ್ ಪತ್ರಿಕೆಯ ೨೮-೩-೮೮ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಜಯನಗರ ಸೌತ್ ಎಂಡ್ ಸರ್ಕಲ್ ಬಳಿಯ ೫ ಎಕರೆ ೩೪ ಗುಂಟೆ ಆಸ್ತಿ ವರ್ಗಾವಣೆ ವ್ಯವಹಾರದಲ್ಲಿ ಕಂಡು ಬರುವ ರೇವಜೀತು ಬಿಲ್ಡರ್ಸ್